# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 275 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.09.2022 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಾರ್ವಜನಿಕ ಉದ್ದೇಶಗಳಾದ ಮನೆ, ನಿವೇಶನ, ಸಾರ್ವಜನಿಕ ಕಟ್ಟಡ, ಘನ/ದ್ರವ ತ್ಯಾಜ್ಯ ನಿರ್ವಹಣೆ, ಸ್ಮಶಾನ, ಇತ್ಯಾದಿಗಳಿಗಾಗಿ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಭೂಮಿ ಮಂಜೂರು ಮಾಡುವ ಎಷ್ಟು ಪ್ರಸ್ತಾವನೆಗಳು ಕಂದಾಯ ಇಲಾಖೆಯ ಮುಂದಿದೆ (ಸಂಪೂರ್ಣ ಮಾಹಿತಿ ನೀಡುವುದು)</td><td>ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 71 ರಡಿ ಸಾರ್ವಜನಿಕ ಕಟ್ಟಡ, ಘನ/ದ್ರವ ತ್ಯಾಜ್ಯ ನಿರ್ವಹಣೆ, ಸ್ಮಶಾನ ಇತ್ಯಾದಿಗಳಿಗೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಭೂಮಿಯನ್ನು ಕಾಯ್ದಿರಿಸಲಾಗುತ್ತಿದೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಜಮೀನು ಕಾಯ್ದಿರಿಸಲು ಬಾಕಿಯಿರುವ ಪ್ರಕರಣಗಳ ವಿವರ ಈ ಕೆಳಗಿನಂತಿದೆ:-<br><br>
<table>
<tr><th>ಉದ್ದೇಶ</th><th>ಉಡುಪಿ</th><th>ದಕ್ಷಿಣ ಕನ್ನಡ</th></tr>
<tr><td>ಘನತ್ಯಾಜ್ಯ</td><td>11</td><td>15</td></tr>
<tr><td>ಸ್ಮಶಾನ</td><td>0</td><td>0</td></tr>
<tr><td>ಮನೆ ನಿವೇಶನ</td><td>18</td><td>52</td></tr>
<tr><td>ಸಾರ್ವಜನಿಕ ಕಟ್ಟಡ</td><td>15</td><td>4</td></tr>
<tr><td>ಒಟ್ಟು</td><td>44</td><td>71</td></tr>
</table></td></tr>
<tr><td>(ಆ)</td><td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಪ್ರಸ್ತಾವನೆಗಳು ಎಷ್ಟು ಅವಧಿಯಿಂದ ಮಂಜೂರಾತಿಗೆ ಬಾಕಿಯಿದೆ: ಮಂಜೂರಾತಿಗೆ ತಡವಾಗಲು ಕಾರಣಗಳೇನು; (ತಾಲೂಕುವಾರು ವಿವರ ನೀಡುವುದು)</td><td>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>(ಇ)</td><td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಭೂಮಿ ಮಂಜೂರಾತಿ ವಿಳಂಬದಿಂದಾಗಿ ಸಮಯ ನಿರ್ಧರಿತ (ಟೈಮ್ ಬೌಂಡ್) ಯೋಜನೆಗಳು ಅನುಷ್ಠಾನದಲ್ಲಿ ಹಿಂದುಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರಕಾರ ಏನು ಕ್ರಮ ಜರುಗಿಸಿದೆ? (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)</td><td>ಸಾರ್ವಜನಿಕ ಉದ್ದೇಶಕ್ಕೆ ಜಮೀನು ಕಾಯ್ದಿರಿಸುವಲ್ಲಿ ಯಾವುದೇ ವಿಳಂಬವಾಗುತ್ತಿಲ್ಲ .</td></tr>
</table>

(ಕಡತ ಸಂಖ್ಯೆ:ಕಂಇ 91 ಎಲ್‌ಜಿಎ 2022)

**(ಆರ್.ಅಶೋಕ)**
ಕಂದಾಯ ಸಚಿವರು

# ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 275ರ ಅನುಬಂಧ

**ಉಡುಪಿ ಜಿಲ್ಲೆ:-**

- ಬೈಂದೂರು ತಾಲೂಕು : ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂದಪಟ್ಟಂತೆ 1 ಪ್ರಕರಣ ಕಂದಾಯ ನಿರೀಕ್ಷಕರಲ್ಲಿ ತನಿಖಾ ವರದಿಗಾಗಿ ಬಾಕಿ ಇದೆ. ಹಾಗೂ ಮನೆ ನಿವೇಶನಕ್ಕೆ ಸಂಬಂಧಿಸಿದಂತೆ 2 ಪ್ರಕರಣದಲ್ಲಿ ಡೀಮ್ಡ್ ಅರಣ್ಯದ ವ್ಯಾಪ್ತಿಯಲ್ಲಿ ಬರುವುದರಿಂದ ಅರಣ್ಯ ಇಲಾಖೆಗೆ ಪತ್ರ ಬರೆಯಲಾಗಿದ್ದು ವರದಿ ಸ್ವೀಕತವಾಗಲು ಬಾಕಿ ಇರುವುದಾಗಿದೆ.

- ಕುಂದಾಪುರ ತಾಲೂಕು : ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ 3 ಪ್ರಸ್ತಾವನೆ ಕಂದಾಯ ನಿರೀಕ್ಷಕರಲ್ಲಿ ತನಿಖೆಗಾಗಿ ಬಾಕಿ ಇರುತ್ತದೆ ಹಾಗೂ 1 ಕಡತ ಮೋಜಣಿದಾರರಲ್ಲಿ ಅಳತೆಗಾಗಿ ಬಾಕಿ ಇದೆ. ಮನೆ ನಿವೇಶಕ್ಕೆ ಸಂಬಂದಪಟ್ಟಂತೆ 2 ಕಡತದಲ್ಲಿ ಡೀಮ್ಡ್ ಅರಣ್ಯದ ವ್ಯಾಪ್ತಿಯಲ್ಲಿ ಬರುವುದಾಗಿರುವುದರಿಂದ ಅರಣ್ಯ ಇಲಾಖೆಯ ಅಭಿಪ್ರಾಯಕ್ಕಾಗಿ ಬಾಕಿ ಇರುವುದಾಗಿದೆ. ಉಳಿದ 3 ಪ್ರಸ್ತಾವನೆಗಳು ಕಂದಾಯ ನಿರೀಕ್ಷಕರಲ್ಲಿ ತನಿಖಾ ಹಂತದಲ್ಲಿ ಬಾಕಿ ಇರುವುದಾಗಿದೆ.

- ಬ್ರಹ್ಮಾವರ ತಾಲೂಕು : ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ 1 ಕಡತ , ಮನೆ ನಿವೇಶಕ್ಕೆ ಸಂಬಂದಪಟ್ಟ 1 ಕಡತ ಮತ್ತು ಮನೆ ನಿವೇಶಕ್ಕೆ ಸಂಬಂದಪಟ್ಟ 1 ಕಡತ ಮೋಜಣಿದಾರರಲ್ಲಿ ಅಳತೆಗಾಗಿ ಬಾಕಿ ಇರುತ್ತದೆ.

- ಉಡುಪಿ ತಾಲೂಕು : ಸಾರ್ವಜನಿಕ ಕಟ್ಟಡಕ್ಕೆ ಸಂಬಂದಪಟ್ಟಂತೆ 7 ಕಡತ ಕಂದಾಯ ನಿರೀಕ್ಷಕರಲ್ಲಿ ತನಿಖೆಗಾಗಿ ಮತ್ತು 2 ಕಡತ ತಾಲೂಕು ಕಛೇರಿಯಲ್ಲಿ ಪ್ರಸ್ತಾವನೆ ಹಂತದಲ್ಲಿ ಬಾಕಿ ಇದೆ ಹಾಗೂ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ 1 ಕಡತ ಕಂದಾಯ ನಿರೀಕ್ಷಕರಲ್ಲಿ ಬಾಕಿ ಇದೆ.

- ಕಾಪು ತಾಲೂಕು : ಮನೆ ನಿವೇಶಕ್ಕೆ ಸಂಬಂದಪಟ್ಟ 5 ಕಡತಗಳು ಮೋಜಣಿಗಾಗಿ ಬಾಕಿ, ಕಂದಾಯ ನಿರೀಕ್ಷಕರಲ್ಲಿ 1 ಪ್ರಕರಣ ತನಿಖೆಗಾಗಿ ಬಾಕಿ ಇದೆ ಮತ್ತ 1 ಕಡತ ತಾಲೂಕು ಕಛೇರಿಯಲ್ಲಿ ಪ್ರಸ್ತಾವನೆಯ ಹಂತದಲ್ಲಿದೆ.

- ಹೆಬ್ರಿ ತಾಲೂಕು : ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ 1 ಕಡತ ಬಾಕಿಯಿದ್ದು, ಡೀಮ್ಡ್ ಅರಣ್ಯದ ಕಾರಣ ಜಂಟಿ ಮೋಜಣಿ ನಡೆಸಿ ವರದಿ ನೀಡಲು ತಹಶೀಲ್ದಾರರ ಹಂತದಲ್ಲಿ ಬಾಕಿ ಇರುತ್ತದೆ ಹಾಗೂ ಸಾರ್ವಜನಿಕ ಕಟ್ಟಡದ ಉದ್ದೇಶಕ್ಕೆ ಸಂಬಂದಪಟ್ಟಂತೆ 6 ಕಡತಗಳು ಅಳತೆ ಕಾರ್ಯ ಮತ್ತು ವರದಿಗಾಗಿ ತನಿಖಾ ಹಂತದಲ್ಲಿ ಬಾಕಿ ಇರುವುದಾಗಿದೆ.

- ಕಾರ್ಕಳ ತಾಲೂಕು : ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂದಪಟ್ಟಂತೆ 3 ಪ್ರಕರಣವು ತಾಲೂಕು ಕಛೇರಿಯಲ್ಲಿ ಪ್ರಸ್ತಾವನೆ ಹಂತದಲ್ಲಿ ಬಾಕಿ ಇರುತ್ತದೆ ಹಾಗೂ ಮನೆ ನಿವೇಶನಕ್ಕೆ ಸಂಬಂಧಿಸಿದಂತೆ 1 ಕಡತಗಳು ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲು ಬಾಕಿ ಇರುತ್ತದೆ.

**ದಕ್ಷಿಣ ಕನ್ನಡ ಜಿಲ್ಲೆ:-**

- ಬಂಟ್ವಾಳ ತಾಲೂಕು: ಘನತ್ಯಾಜ್ಯ ವಿಲೇವಾರಿ ಘಟಕ ಹಾಗೂ ಮನೆ ನಿವೇಶನಕ್ಕೆ ಸಂಬಂಧಿಸಿದಂತೆ 4-5 ತಿಂಗಳುಗಳಿಂದ ಕಡತಗಳು ಬಾಕಿಯಿದ್ದು, ಈ ಎಲ್ಲಾ ಕಡತಗಳು ಜಮೀನು ಅಳತೆ ಮಾಡಿ ನಕ್ಷೆ ತಯಾರಿಸುವ ಹಂತದಲ್ಲಿ ಇರುತ್ತದೆ.

- ಮೂಡಬಿದ್ರೆ ತಾಲೂಕು: ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ ಒಂದು ಪ್ರಸ್ತಾವನೆ ಒಂದು ತಿಂಗಳ ಅವಧಿಯಲ್ಲಿ ಬಂದ ಕೋರಿಕೆಯಾಗಿದ್ದು, ನಕ್ಷೆ ತಯಾರಿಸಲಾಗಿ, ಪ್ರಸ್ತಾವನೆ ಹಂತದಲ್ಲಿ ಇರುತ್ತದೆ. ಇನ್ನೊಂದು ಪ್ರಕರಣವು ಪೂರಂಬೋಕು ವಿರಹಿತಪಡಿಸಲು ಕ್ರಮವಹಿಸಲಾಗುತ್ತಿದೆ.

- ಪುತ್ತೂರು ತಾಲೂಕು: ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದ 2 ಕಡತಗಳು ಒಂದು ತಿಂಗಳಿನಿಂದ ಪ್ರಸ್ತಾವನೆ ಹಂತದಲ್ಲಿ ಬಾಕಿಯಿರುತ್ತದೆ.

- ಬೆಳ್ತಂಗಡಿ ತಾಲೂಕು: ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ 4 ಕಡತಗಳು ಕುಮ್ಕಿ ವಿರಹಿತಪಡಿಸುವ ಬಗ್ಗೆ 4 ತಿಂಗಳಿನಿಂದ ಬಾಕಿಯಿರುವುದಾಗಿದೆ. ಸಾರ್ವಜನಿಕ ಕಟ್ಟಡ ಉದ್ದೇಶಕ್ಕೆ 4 ಕಡತಗಳು ಪ್ರಸ್ತಾವನೆ ಹಂತದಲ್ಲಿ 3 ತಿಂಗಳಿನಿಂದ ಬಾಕಿ ಇರುತ್ತದೆ. ಮನೆ ನಿವೇಶನ ಉದ್ದೇಶಕ್ಕೆ 20 ಕಡತಗಳ ಪೈಕಿ 3 ಕಡತಗಳು ಕುಮ್ಕಿ ವಿರಹಿತ ಪಡಿಸುವ ಬಗ್ಗೆ 5 ತಿಂಗಳಿನಿಂದ ಬಾಕಿ ಇರುತ್ತದೆ. ಮತ್ತು ಉಳಿಕೆ 17 ಕಡತಗಳು ತಹಶೀಲ್ದಾರರ ಕಚೇರಿಯಲ್ಲಿ ಪ್ರಸ್ತಾವನೆ ಹಂತದಲ್ಲಿ ಬಾಕಿ ಇರುತ್ತದೆ.

- ಸುಳ್ಯ ತಾಲೂಕು: ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸಿದಂತೆ 4 ಕಡತಗಳು ಬಾಕಿಯಿದ್ದು, 3 ತಿಂಗಳಿನಿಂದ ಅರಣ್ಯ ಇಲಾಖೆಯ ಆಕ್ಷೇಪಣೆ ಇರುವ ಕಾರಣದಿಂದ ತಹಶೀಲ್ದಾರರ ಹಂತದಲ್ಲಿ ಬಾಕಿ ಇರುತ್ತದೆ.

- ಕಡಬ ತಾಲೂಕು: ಘನತ್ಯಾಜ್ಯ ವಿಲೇವಾರಿ ಘಟಕ ಹಾಗೂ ಮನೆ ನಿವೇಶನಕ್ಕೆ ಸಂಬಂಧಿಸಿದಂತೆ 2 ಕಡತಗಳು ಬಾಕಿಯಿದ್ದು, ಕುಮ್ಕಿ ವಿರಹಿತ ಪಡಿಸುವ ಬಗ್ಗೆ 5 ತಿಂಗಳಿನಿಂದ ಬಾಕಿಯಿರುವುದಾಗಿದೆ.

* * *